ಕೋಲಾರ ಡಿಸ್ಟ್ರಿಕ್ಟ್.

ತಾರೀಖು 30ನೇ ಏಪ್ರೆಲ್ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಸಲ್ಪಡುವದೇನಂದರೆ, ಚಿಕ್ಕಬಳ್ಳಾಪುರ ತಾಲ್ಲೂಕು ಬಾಬತು 1885—86ನೇ ಪಾರ್ಥಿವ 1886–87ನೇ ವ್ಯಯ ಮತ್ತು 1887–88ನೇ ಸರ್ವಜಿತು ಈ 3 ಸಾಲ್‌ಗಳ ಲಾಖ ಇಜಾರೆಯು, 1885ನೇ ಇಸವಿ ಜೂ 10ನೇ ತಾರೀಖಿನಲ್ಲಿ ಆ ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರವರ ರೂಬರೂ ಬಹಿರಂಗವಾಗಿ ಸಾಲ್‌ವಾರ್ ಹರಾಜು ಮಾಡಲ್ಪಡುವದು, ಹರಾಜ್ ಬಿವಿ 11 ಘಂಟೆಗೆ ಆರಂಭವಾಗಿ ಸಾಯಂಕಾಲ 6 ಘಂಟೆಗೆ ಖೈದ್ ಮಾಡಲ್ಪಡುವದು.

ಹರಾಜ್ ಖೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲಿ ಮೊಬಲಗು ಪೈಕೀ ಶೇಕಡಾ 25 ರೂಪಾಯಿಗಳ ಪ್ರಕಾರ ಠೇವಣಿ ಯಿಡಬೇಕು, ಹರಾಜ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ಲಿಖಿತ ಮೂಲಕವಾಗಿ ತಿಳಿಸಲ್ಪಟ್ಟ ಲಾಗಾಯತು 15 ದಿವಸಗಳ ವಳಗಾಗಿ ಬಾಕೀ ಮೊಬಲಗನ್ನು ಪೂರತೀ ಮಾಡಿ ಕ್ರಮಪ್ರಕಾರ ಸ್ಟ್ಯಾಂಪು ಕಾಗದದಲ್ಲಿ ಇಜಾರೆ ಮುಚ್ಚಲಿಕೆಯನ್ನ ಬರೆದುಕೊಡಬೇಕು.

ಮೇಲ್ಕಂಡ ಪರತ್ತುಗಳ ಪೈಕೀ ಯಾವದಕ್ಕೆ ಚಡ ಸವಾಲ್‌ದಾರ ತಪ್ಪಿದಾಗ್ಯೂ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಲ್ಲಿ ಲುಕ್ಸಾನು ಉಂಟಾದರೆ ಆ ಲುಕ್ಸಾನು ಮೊಬಲಗು ಮೊದಲು ಚಡ ಸವಾಲ್‌ದಾರನಿಂದ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲ್ಪಡುತ್ತೆ.

ಸಿ. ಸುಬ್ಬರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ನಂ 2. ತಾರೀಖು 24ನೇ ಏಪ್ರೆಲ್ 1885.

ಹೆಗ್ಗಡದೇವನಕೋಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸುವ ದಸ್ತಾವೇಜನ್ನ ಕ್ರಮವಾದ ವಾರಸದಾರನಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವ್ಯಾಪ್ತಿ ಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
81 ——— 82—83	ಹೆಗ್ಗಡದೇವನಕೋಟೆ ತಾಲ್ಲೂಕು ಮಟ್ಟಿಕೆರೆಲಿರುವ ತೆಲಗುಬಣಜಿಗರ ಜಾತಿಸೂಳೀರ ತಿಮ್ಮನ ಮಗ ವೆಂಕಟರಮಣ.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಇರುವ ತೆಲಗುಬಣಜಿಗರ ಜಾತಿ ಕಾಳಮ್ಮನ ಮಗ ಪೋಲಿಸ್‌ಜವಾನ ವೆಂಕಟರಾಮಯ್ಯ	12—1—83	12—1—83	(50) ರೂಪಾಯಿನ ಜಮ್ಮಾ ಕ್ರಯ ಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 17ನೇ ಏಪ್ರೆಲ್ 1885.

ಇದರಿಂದ ಪ್ರಕಟಪಡಿಸಲ್ಪಡುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತೀ ಬಾಬತು ಇದರಡಿ ಕಂಡ ನಾಟೂಗಳು ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್‌ವೇಟರವರಿಂದ ಈ ಕೆಳಗೆ ನಮೂದಾದ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.